# ಹೆಲಿಕಾಪ್ಟರ್ ಹಾರಿಸಬೇಡಿ

## ಉತ್ತಮ ಪಾಲಕರಾಗಿ



ಹದಿಮೂರು ವರ್ಷದ ಮುದ್ದಿನ ಮಗಳು ದಿಶಾ ಇದ್ದಕ್ಕಿದ್ದಂತೆ ವಾಂತಿ, ತಲೆಸುತ್ತು ಎಂದಾಗ ಅಮ್ಮನಿಗೆ ಗಾಬರಿ. ಪರೀಕ್ಷೆ ಮಾಡಿದ ವೈದ್ಯರು ಹೇಳಿದ್ದು ಆಘಾತಕಾರಿ ಸುದ್ದಿ. ಆಡುವ ಕೂಸಿನ ಗರ್ಭದಲ್ಲಿ ಕಾಡುವ ಕೂಸೊಂದು ಚಿಗುರೊಡೆದಿತ್ತು. ವಿಚಾರಿಸಿ ನೋಡಿದಾಗ ಟ್ಯೂಷನ್ ಟೀಚರ್ ಹೆಸರು ಹೇಳಿತ್ತು ಹುಡುಗಿ. ಈ ವಯಸ್ಸಿನ ಹೆಣ್ಣು ಮಗಳಿಗಿರುವ ಸಾಮಾನ್ಯ ಜ್ಞಾನ ಅವಳಿಗಿಲ್ಲದ್ದರ ಫಲವಿದು.

ಮಗಳ ಮೇಲಿನ ಅತಿಯಾದ ಕಾಳಜಿಯ 'ಹೆಲಿಕಾಪ್ಟರ್ ಪೇರೆಂಟಿಂಗ್'ನ ಪರಿಣಾಮದ ಒಂದು ಉದಾಹರಣೆ ಇದು. ಪ್ರತಿಯೊಂದರಲ್ಲೂ ಬೆಸ್ಟ್ ಎಂಬುದನ್ನು ಕೊಟ್ಟರೆ ಮಾತ್ರ ಮಗು ಯಶಸ್ವಿ ಎನ್ನಿಸಿಕೊಳ್ಳಲು ಸಾಧ್ಯ ಎಂಬ ತಂದೆ ತಾಯಿಯರ ನಂಬಿಕೆಯ ಫಲಶ್ರುತಿಯೇ 'ಹೆಲಿಕಾಪ್ಟರ್ ಪೇರೆಂಟಿಂಗ್'.

ಮಕ್ಕಳ ಪ್ರತಿ ಹೆಜ್ಜೆಯನ್ನೂ ತಾವೇ ನಿರ್ಧರಿಸಿ ನಡೆಸುವ ಅಪ್ಪ ಅಮ್ಮಂದಿರಿಗೆ 'ಹೆಲಿಕಾಪ್ಟರ್ ಪೇರೆಂಟ್ಸ್' ಎಂದು ಹೆಸರಿಸಿದವರು ಫಾಸ್ಟರ್ ಡಬ್ಲ್ಯು ಕ್ಲೈನ್ ಹಾಗೂ ಜಿಮ್ ಫೇ. ಮಕ್ಕಳ ಬಗ್ಗೆ ತೋರುವ ಅತಿ ಕಾಳಜಿಯನ್ನು 'ಓವರ್ ಪೇರೆಂಟಿಂಗ್' ಎನ್ನುತ್ತಾರೆ ಮನಃಶಾಸ್ತ್ರಜ್ಞರು.

ಆರ್ಥಿಕ ಸಬಲತೆ ಸಾಧಿಸಿದ ನಂತರವೇ ಮಗುವಾದರೆ ಸಾಕು ಎಂಬ ನಿರ್ಧಾರವನ್ನು ಬಲವಾಗಿ ನೆಚ್ಚಿಕೊಳ್ಳುವ ಇಂಥವರು ಮಗು ಗರ್ಭಾವಸ್ಥೆಯಲ್ಲಿದ್ದಾಗಲೇ 'ದಿ ಬೆಸ್ಟ್' ಶಾಲೆಯ ಹುಡುಕಾಟಕ್ಕೆ ತೊಡಗುತ್ತಾರೆ. ಮಗುವನ್ನು ಯಶಸ್ವಿಯಾಗಿಸುವುದು ಹೇಗೆ ಎಂಬ ಅಷ್ಟೂ ಪುಸ್ತಕಗಳನ್ನು ತಂದಿಟ್ಟುಕೊಂಡು ಅಧ್ಯಯನ ಮಾಡುತ್ತಾರೆ. ಯಶಸ್ಸಿನ ದಾರಿಯನ್ನು ತಾವೇ ಹಾಕಿಕೊಟ್ಟು ನಡೆಸಿದರೆ ಮಾತ್ರ ಅದು ಸಾಧ್ಯ ಎಂಬ ಭ್ರಮೆಯಲ್ಲಿ ಮಕ್ಕಳನ್ನು ಬೆಳೆಸಹೊರಡುತ್ತಾರೆ. ಈ ಮೂಲಕ ಸಹಜ ಬದುಕಿನಿಂದ ಮಕ್ಕಳನ್ನು ವಂಚಿಸುತ್ತಿದ್ದೇವೆನ್ನುವುದು ಅರಿವಾಗುವುದೇ ಇಲ್ಲ. 'ಬೆಸ್ಟ್' ಅನ್ನುವಂಥದ್ದನ್ನು ಮಗುವಿಗೆ ಕೊಡಬೇಕೆಂಬ ಹಪಹಪಿಯಲ್ಲಿ ಅವರು ಪ್ರತಿ ಹೆಜ್ಜೆಯನ್ನೂ ಖುದ್ದಾಗಿ ಗಮನಿಸುತ್ತಾರೆ. ಮಗುವಿನ ದೈನಂದಿನ ಅವಶ್ಯಗಳಿಂದ ಹಿಡಿದು ಯಾವ ಶಾಲೆ, ಯಾವ ಬೆಂಚು, ಯಾರ ಗೆಳೆತನ, ಯಾವ ಆಟ, ಯಾವ್ಯಾವ ಸಂದರ್ಭಕ್ಕೆ ಯಾವ್ಯಾವ ಬಟ್ಟೆ ಎಲ್ಲವನ್ನೂ ಅಪ್ಪ ಅಮ್ಮನೇ ನೋಡಿಕೊಳ್ಳುವ ಕಾರಣ ಮಗು ಬದುಕಿಗೆ ತೆರೆದುಕೊಳ್ಳುವುದೇ ಇಲ್ಲ. ಇಂಥ ಅಪ್ಪ ಅಮ್ಮಂದಿರು ಮಕ್ಕಳಿಗೆ ಏನು ಬೇಕು ಅನ್ನೋದನ್ನ ತಾವೇ ನಿರ್ಧರಿಸಿ ಅವರು ಕೇಳುವ ಮೊದಲೇ ತಂದು ಕೊಟ್ಟಿರುತ್ತಾರೆ. ಮಗು ತನ್ನ ಆಸಕ್ತಿಯನ್ನು ಗುರುತಿಸಿಕೊಳ್ಳುವ ಮೊದಲೇ ತಮ್ಮ ಆಸೆಗನುಸಾರವಾಗಿ ಡಾಕ್ಟರ್, ಇಂಜಿನಿಯರ್, ಮಾಡೆಲ್, ವಿಜ್ಞಾನಿ ಏನಾಗಬೇಕೆಂದು ನಿರ್ಧರಿಸಿ ಅದನ್ನು ಸಾಧಿಸಲು ಏನು ಬೇಕೋ ಅಷ್ಟನ್ನು ಒದಗಿಸುತ್ತಾರೆ. ಯಾವುದೇ ಜವಾಬ್ದಾರಿಯನ್ನು ಮಗುವಿಗೆ ಕೊಡದೇ ಇರುವ ಮೂಲಕ ಮಗು ತನ್ನ ಪೂರ್ತಿ ಬುದ್ಧಿಶಕ್ತಿ ಮತ್ತು ಸಮಯದ ಗುರಿ ಮುಟ್ಟಲು ಬೇಕಾದ ಸಿದ್ಧತೆಗಾಗಿ ವ್ಯಯಿಸಲು ಅನುವು ಮಾಡಿದ್ದೇವೆಂದು ಬೀಗುತ್ತಾರೆ. ಎಲ್ಲವೂ ಕಾಲ ಬಳಿಗೇ ಬಂದು ಬೀಳುವ ಕಾರಣ ಹೊರ ಜಗತ್ತಿಗೆ ಕಾಲಿಡಬೇಕಾದ ಅವಶ್ಯ ಮಗುವಿಗೂ ಇರುವುದಿಲ್ಲ. ತಾವೇ ಎಲ್ಲವನ್ನು ಮಾಡುವ ಭರದಲ್ಲಿ ಮಕ್ಕಳಿಗೆ ಏನನ್ನೂ ಕಲಿಸಿಲ್ಲ ಅನ್ನುವುದು ಅವರ ಅರಿವಿಗೇ ಬಂದಿರುವುದಿಲ್ಲ. ಪರಿಣಾಮ ಬದುಕಿನ ಮೊದಲ ಮೆಟ್ಟಿಲಲ್ಲೇ ಎಡವುವ ದಿಶಾಳಂಥ ಮಕ್ಕಳು ಸಿದ್ಧರಾಗುತ್ತಾರೆ. ಬದುಕಿನ ಬಗ್ಗೆ ಅಕ್ಕರೆ ಹುಟ್ಟುವ ಮೊದಲೇ ಬದುಕನ್ನು ಆಸ್ವಾದಿಸುವ ಆಸಕ್ತಿ ಹೊರಟುಹೋಗುತ್ತದೆ.

ಚಟ್ಟನೂಗಾದಲ್ಲಿರುವ ಟೆನ್ನೆಸ್ಸೀ ಯುನಿವರ್ಸಿಟಿಯಲ್ಲಿನ ಇತ್ತೀಚಿನ ಸಂಶೋಧನೆಗಳ ಪ್ರಕಾರ 'ಹೆಲಿಕಾಪ್ಟರ್ ಪೇರೆಂಟಿಂಗ್' ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮ ಬೀರುವುದೇ ಹೆಚ್ಚು. ಇಂಥ ಮಕ್ಕಳಲ್ಲಿ ತಾರುಣ್ಯದಲ್ಲಿ ಖಿನ್ನತೆ, ಮಾನಸಿಕ ಒತ್ತಡ ಗಣನೀಯ ಪ್ರಮಾಣದಲ್ಲಿ ಕಂಡುಬರುತ್ತದೆ ಎನ್ನಲಾಗಿದೆ. ಸಂಶೋಧಕರೂ, ಆಪ್ತ ಸಲಹೆಗಾರರೂ ಆಗಿರುವ ರೋಜರ್ ಟ್ರಿಪ್ ಪ್ರಕಾರ 'ತಾರುಣ್ಯದಲ್ಲಿ ಬಹಳ ಅವಶ್ಯವೆನಿಸುವ ಸಾಮಾಜಿಕ ನಡವಳಿಕೆಗಳು ಹೆಲಿಕಾಪ್ಟರ್ ಪೇರೆಂಟ್ಸ್‌ನ ಮಕ್ಕಳಲ್ಲಿ ಬಹಳ ಕಡಿಮೆಯಾಗಿರುತ್ತವೆ. ಮಗುವನ್ನು ನೋವಾಗದಂತೆ ಬೆಳೆಸುವುದು ಅವರ ಮುಖ್ಯ ಉದ್ದೇಶವಾಗಿದ್ದು ಇದು ಯಾವ ಮಟ್ಟಕ್ಕೆಂದರೆ, ಕೆಲವು ಪಾಲಕರು ಮಕ್ಕಳು ಕೆಲಸಕ್ಕೆ ಸೇರುವಾಗ ಸಂದರ್ಶನಕ್ಕೂ ಜತೆಯಲ್ಲೇ ಹೋಗುತ್ತಾರೆ ಮತ್ತು ವೇತನದ ವಿಚಾರವನ್ನೂ ತಾವೇ ಚರ್ಚೆ ಮಾಡಲು ಮುಂದಾಗುತ್ತಾರೆ. ಈ ಮೂಲಕ ಬದುಕನ್ನು ಎದುರಿಸಲಾಗದಂತೆ ಅವರನ್ನು ಬೆಳೆಸುತ್ತಿದ್ದೇವೆಂಬುದು ಬಹಳಷ್ಟು ಸಂದರ್ಭಗಳಲ್ಲಿ ಅವರಿಗೆ ಅರಿವಾಗಿರುವುದಿಲ್ಲ. ತಮ್ಮ ಕಾಳಜಿಯ ಮೂಲಕ ಪ್ರೀತಿ ತೋರಿಸುತ್ತಿದ್ದೇವೆಂದು ನಂಬಿರುತ್ತಾರೆ'.

ಬದುಕೇ ಮಗುವಿಗೆ ನಿಜವಾದ ಪಾಠಶಾಲೆ. ಬೆಳೆಯುತ್ತ ಹೋದಂತೆ ಮಗು ಕಲಿಯುತ್ತ ಹೋಗುತ್ತದೆ. ಅತಿ ಕಾಳಜಿ ಅವಶ್ಯವಿಲ್ಲ. ಈ ನಿಟ್ಟಿನಲ್ಲಿ ತಂದೆ ತಾಯಂದಿರು ಒಂದಷ್ಟು ಅಂಶಗಳನ್ನು ಗಮನಿಸಲೇಬೇಕು.

■ ಶಮ ನಂದಿಬೆಟ್ಟ

- ಮಗು ಬದುಕಿನ ಎಲ್ಲ ಭಾವನೆಗಳನ್ನು ಅನುಭವಿಸಲಿ. ಅದರಿಂದ ವ್ಯಕ್ತಿತ್ವ ಗಟ್ಟಿಯಾಗುತ್ತದೆ.
- ಮಗು ಖುಷಿಯಾಗಿರುವುದು ಎಂದರೆ ಸಮಸ್ಯೆಗಳು ಬರದಂತೆ ತಡೆಯುವುದಲ್ಲ; ಸಮಸ್ಯೆಗಳನ್ನು ಎದುರಿಸುವುದರಲ್ಲಿ ಇರುವ ಖುಷಿ ಅರ್ಥವಾಗಲಿ.
- ಕೇಳುವ ಮೊದಲೇ ಅವಶ್ಯಗಳನ್ನು ಪೂರೈಸುವುದು ನಿಮ್ಮ ಹೆಮ್ಮೆಯಿರಬಹುದು. ಆದರೆ ಅದರಿಂದ ಮಗುವಿನಲ್ಲಿ ಕೇಳುವ ರೀತಿ ನೀತಿಗಳನ್ನೂ, ನಿರೀಕ್ಷೆಯ ಖುಷಿಯನ್ನೂ ನೀವು ಕಸಿದುಕೊಳ್ಳುತ್ತೀರಿ.
- ಯಾವುದೋ ಸಣ್ಣಪುಟ್ಟ ಜಗಳಗಳಿಂದ ಗೆಳೆಯರ ಜತೆ ಮಾತು ಬಿಟ್ಟಿದ್ದರೆ ನೀವು ಮಧ್ಯವರ್ತಿಯಾಗಬೇಡಿ. ತಪ್ಪು ತಿಳಿವಳಿಕೆಗಳನ್ನು ಸರಿಪಡಿಸಿಕೊಂಡು ಅವರೇ ಒಂದಾಗಲಿ. ರಾಜಿಯಾಗುವುದನ್ನು, ಬದುಕಿನ ತೊಡಕುಗಳನ್ನು ಬಿಡಿಸಿಕೊಳ್ಳುವುದನ್ನು ಮಗು ತಾನಾಗಿ ಕಲಿಯಲಿ.
- ಯಾವ ರೀತಿಯ ಸ್ನೇಹಿತರನ್ನು ಆಯ್ಕೆ ಮಾಡಿಕೊಂಡಿದ್ದಾರೆಂದು ಗಮನಿಸುತ್ತಿರಿ; ಆದರೆ ನೀವೇ ಆಯ್ಕೆ ಮಾಡಬೇಡಿ. ಅವರ ಆಯ್ಕೆಯಲ್ಲಿ ತಪ್ಪಿದ್ದಾಗ ತಿದ್ದಿ.
- ಮಗು ಕೇಳಿದ್ದನ್ನು ತಕ್ಷಣ ತಂದು ಕೊಡಬೇಡಿ; ಒಂದಷ್ಟು ಕಾಯಲಿ. ಕಾಯುವಿಕೆ ವ್ಯಕ್ತಿತ್ವಕ್ಕೆ ತಾಳ್ಮೆಯನ್ನು ತಂದುಕೊಡುತ್ತದೆ. ತಾಳ್ಮೆಗೆ ಬದುಕಿನಲ್ಲಿ ಅದರದೇ ಆದ ಘನತೆಯಿದೆ.
- ಸದಾ ಮಗುವಿನ ಜತೆಗೇ ಇರಬೇಡಿ; ಒಂದಷ್ಟು ಹೊತ್ತು ಮಗು ಒಂಟಿಯಾಗಿರಲಿ. ಒಂಟಿತನ ಕ್ರಿಯಾಶೀಲ ಯೋಚನೆಗಳಿಗೆ ರಹದಾರಿ, ಜತೆಗೇ ಒಂಟಿತನದಲ್ಲಿನ ಖುಷಿಯೂ ಅರಿವಾಗಲು ಅವಕಾಶ.
- ಸಾಧ್ಯವಾದಷ್ಟು ಮಗುವನ್ನು ಒಂಟಿಯಾಗಿ ತರಬೇತಿಗಾಗಲಿ, ಟ್ಯೂಷನ್‌ಗಾಗಲಿ ಕಳುಹಿಸಬೇಡಿ. ಎಲ್ಲರ ಜತೆ ಬೆರೆತು ಕಲಿಯಲಿ. ಅದು ಸುರಕ್ಷಿತವೂ ಹೌದು. ಮಗು ಸಾಮಾಜಿಕ ನಡೆನುಡಿಯನ್ನು ಕಲಿಯಲು ಸಹಕಾರಿಯೂ ಹೌದು.